ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಬುಧವಾರ ೬ನೇ ಜನವರಿ ೧೯೯೩, ಪುಷ್ಯ ೧೬, ಶಕ ೧೯೧೪ಳ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧.೦೫ ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು : (ಶ್ರೀಮತಿ ನಾಗಮ್ಮ ಕೇಶವಮೂರ್ತಿ)ಯವರು ಪೀಠವನ್ನು

ಅಲಂಕರಿಸಿದ್ದರು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ರಾಜ್ಯ ರಸ್ತೆ ಸಾರಿಗೆ ಸಿಬ್ಬಂದಿ ವರ್ಗದ ಆಸ್ತಿಪಾಸ್ತಿಗಳ ತನಿಖೆ

978 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸಿಬ್ಬಂದಿ ವರ್ಗದವರ ಆಸ್ತಿಪಾಸ್ತಿಗಳ ತನಿಖೆ ನಡೆಸಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ?

ಆ) ಸಾರಿಗೆ ಇಲಾಖೆಯಲ್ಲಿ ಭ್ರಷ್ಟಾಚಾರದ ಬಗ್ಗೆ ದೂರುಗಳಿರುವುದರಿಂದ ತನಿಖೆಯ ಕ್ರಮ ಅಗತ್ಯವಲ್ಲವೇ?

ಇ) ತನಿಖೆಯಲ್ಲಿ ಸಿಕ್ಕಿ ಬಿದ್ದವರಿಗೆ ಸೂಕ್ತ ಶಿಕ್ಷೆ ವಿಧಿಸಲಾಗುವುದೆ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಹೌದು.

ಆ) ಹೌದು.

ಇ) ಹೌದು.

ಶ್ರೀ ಬಿ.ಎಂ. ಇದಿನಬ್ಬ : ಮಾನ್ಯ ಉಪಾಧ್ಯಕ್ಷರೇ, ನಾನು ಕೇಳಿದ ಪ್ರಶ್ನೆಗೆ ಅಂದರೆ, ಮೂರು ಪ್ರಶ್ನೆಗಳಿಗೂ, ಹೌದು, ಹೌದು, ಹೌದು ಎಂದು ಹೇಳಿದ್ದಾರೆ. ಒಪ್ಪಿಕೊಂಡಿದ್ದಾರೆ. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸಿಬ್ಬಂದಿ ವರ್ಗದವರ ಆಸ್ತಿಪಾಸ್ತಿಗಳ ತನಿಖೆ ನಡೆಸಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ ಎಂದು ಕೇಳುವುದಕ್ಕೆ "ಹೌದು" ಎಂದು ಹೇಳಿದ್ದಾರೆ. ಸಾರಿಗೆ ಇಲಾಖೆಯಲ್ಲಿ ಭ್ರಷ್ಟಾಚಾರದ ಬಗ್ಗೆ ದೂರುಗಳಿವೆಯೇ ಎಂದು ಕೇಳಿರುವುದಕ್ಕೂ "ಹೌದು" ಎಂದು ಉತ್ತರ ಕೊಟ್ಟಿದ್ದಾರೆ. ಹಾಗಾದರೆ, ಸಾರಿಗೆ ಸಂಸ್ಥೆಯಲ್ಲಿ ಇದ್ದವರ ಆಸ್ತಿಪಾಸ್ತಿ ತನಿಖೆ ಎಲ್ಲಿಯವರೆಗೆ ಮುಟ್ಟಿದೆ ಅಥವಾ ಭ್ರಷ್ಟಾಚಾರದ ವಿಷಯ ಎಲ್ಲಿಯವರೆಗೆ ಮುಟ್ಟಿದೆ, ಇದನ್ನು ತಾವು ಹೇಳುತ್ತೀರಾ?

SRI BHEEMANNA KHANDRE : Madam Deputy Speaker, the hon. Member has asked, (a) whether the Government would take action to conduct an inquiry into the assets and liabilities of the staff of the Karnataka State Road Transport Corporation. I have replied 'Yes' Then vide (b), he has asked, whether holding of an inquiry is not a must since there are complaints of corruption in the Transport department. I have replied 'Yes' Further for Qn. (c) whether appropriate punishment would be imposed against the staff indicted in the inquiry, I have said, 'Yes'.

ಯಾವ ಯಾವ ಕಂಪ್ಲೇಂಟ್ ಈ ಪ್ರಕಾರ ಬಂದಿದೆ. ಅದರ ಬಗ್ಗೆ ಎನ್‌ಕ್ವಯರಿ ಮಾಡುತ್ತಿದ್ದೇವೆ. ಎಷ್ಟೋ ಜನರ ವಿರುದ್ಧ ಆಕ್ಷನ್ ತೆಗೆದುಕೊಂಡಿದ್ದೇವೆ. ಈಗ ಎಲ್ಲಿ ಎನ್‌ಕ್ವಯರಿ ಬಗ್ಗೆ ಸಾಬೀತು ಆಯಿತು, ಅಲ್ಲಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಈಗ ತಮ್ಮ ಪ್ರಶ್ನೆ ಏನು ಅಂದರೆ ಅವರೆಲ್ಲರದು ಎಷ್ಟು ಪ್ರಾಪರ್ಟಿ ಇದೆ ನೀವು ನೋಡಿದರೇನು ಎನ್ನತಕ್ಕಂಥ ಮಾತು ನಮ್ಮಲ್ಲಿ ಗವರ್ನ್‌ಮೆಂಟ್‌ನಲ್ಲಿ ಇನ್ನು ಆ ಬಗ್ಗೆ ಡಿಸೈಡ್ ಮಾಡಿಲ್ಲ. ಅದು ಡಿಸೈಡ್ ಮಾಡಿದರೆ along with these officers belonging to KSRTC.

ಇದರಲ್ಲಿ ತಗೊಂಡಿದ್ದಾರೆ. ಯಾರ್ಯಾರದು ಪ್ರಾಪರ್ಟಿ ಈ ದೇಶದಲ್ಲಿ 20-25 ವರ್ಷದಿಂದ ಹೆಚ್ಚಾಗಿದೆ ಪ್ರಪೋಷನೇಟ್‌ಲಿ ಅವರ ಮೇಲೆ ಆಕ್ಷನ್ ತಗೋಬೇಕು ಎನ್ನತಕ್ಕಂತ ಮಾತು ನಾವು ವಿಚಾರ ಮಾಡುತ್ತಿದ್ದೇವೆ. ಆ ಮಾತನ್ನು ವಿಚಾರ ಮಾಡೋಣ.

ಶ್ರೀ ಬಿ.ಎಂ. ಇದಿನಬ್ಬ : ಉದಾಹರಣೆಗಳು ಇದ್ದರೆ ಹೇಳಬಹುದಲ್ಲ?

ಶ್ರೀ ಭೀಮಣ್ಣ ಖಂಡ್ರೆ : ಅದರ ಬಗ್ಗೆ ತಾವು ದೀರ್ಘವಾದ ಕೊಶ್ಚನ್ ಕೇಳಿದರೆ ಅದು ಉತ್ತರ ಏನು ಎಂದು ಕೊಡುತ್ತೇನೆ. ಎಷ್ಟು ಆಗಿವೆ, ಎಷ್ಟು ಆಗುತ್ತಾ ಇವೆ, ಎಷ್ಟು ಎನ್‌ಕ್ವಯರಿಯಲ್ಲಿ ಇವೆ ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಸಾರಿಗೆ ಮಂತ್ರಿಗಳ ಉತ್ತರವನ್ನು ನೋಡಿ ನನಗೆ ಆಶ್ಚರ್ಯವಾಗಿದೆ. ಸಾರಿಗೆ ಸಂಸ್ಥೆಯ ಸಿಬ್ಬಂದಿ ವರ್ಗದವರ ಆಸ್ತಿಪಾಸ್ತಿಗಳ ತನಿಖೆ ನಡೆಸಲು ಸರ್ಕಾರ ಕ್ರಮ ಕೈಗೊಳ್ಳುವುದೆ ಎಂದಿದ್ದಕ್ಕೆ ಹೌದು ಎಂದಿದ್ದಾರೆ. ಸರ್ಕಾರ ಕೈಗೊಳ್ಳುವುದಕ್ಕೆ ಅವಕಾಶವೇ ಇಲ್ಲ. ಕೆಎಸ್‌ಆರ್‌ಟಿಸಿ ಒಂದು ಮೋಟಾರ್ ವೆಹಿಕಲ್ಸ್ ಆಕ್ಟ್ ಪ್ರಕಾರವಾಗಿ ಆರ್‌ಟಿಸಿ ಆಕ್ಟ್ ಪ್ರಕಾರವಾಗಿ ಒಂದು ಆಕ್ಟ್ ಇದೆ. ಅದಕ್ಕೆ ಒಂದು ಬೋರ್ಡ್ ಇದೆ. ಬೋರ್ಡ್ ಮೇಲೆ ಕ್ರಮ ನೀವು ತೆಗೆದುಕೊಳ್ಳಬಹುದೇ ವಿನಃ how can the Government take action? ನನಗೆ ಗೊತ್ತಿರುವ ಹಾಗೆ ನಾನು ಒಂದು ಸ್ವಲ್ಪ ತಿಂಗಳ ಕಾಲ ಅಲ್ಲಿ ಕೆಲಸ ಮಾಡಿದ್ದೇನೆ. how can the Government take any action? ನಾನು ಏಕೆ ಇದನ್ನು ಹೇಳಿದೆ ಅಂದರೆ ತಾವು ಹೊಸದಾಗಿ ಬಂದಿದ್ದೀರಿ. ಆಫೀಸರ್ಸ್ ನಿಮಗೆ ಕರೆಕ್ಟಾಗಿ ಉತ್ತರ ಕೊಡುವುದಕ್ಕೂ they don't even think about it.

ನಿಮ್ಮಿಂದ ನಾನು ಈ ಉತ್ತರ ನಿರೀಕ್ಷೆ ಮಾಡುತ್ತಾ ಇಲ್ಲ. ನಿಮ್ಮ ಎಲ್ಲಾ ಉತ್ತರಗಳನ್ನು ಅಧಿಕಾರಿಗಳೆ ಬರೆಯತಕ್ಕಂಥಾದ್ದು. ಅಧಿಕಾರಿಗಳು ಉತ್ತರವನ್ನು

ಕಳಿಸತಕ್ಕಂತಹ ಸಂದರ್ಭದಲ್ಲಿ ನಿಮ್ಮ ಅಪ್ರೂವಲ್ ಕೊಡತಕ್ಕಂತಹ ಸಂದರ್ಭದಲ್ಲಿ there is a Board, there is a disciplinary action Committee. The Board has to implement the orders of the disciplinary action committee How can the Government intervene in this?

ಶ್ರೀ ಭೀಮಣ್ಣ ಖಂಡ್ರೆ : ಇವರು ಏನು ಕೇಳಿದ್ದಾರೆ ಪ್ರಾಪರ್ಟಿ ಬಗ್ಗೆ ಕೇಳಿದ್ದಾರೆ. ಪ್ರಾಪರ್ಟಿ ಬಗ್ಗೆ ನೀವು ಹೇಳುವ ಅರ್ಥದಲ್ಲಿ ನಾನು ಹೇಳಿನ್ನೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಪ್ರಾಪರ್ಟಿ ಬಗ್ಗೆ ಇರಬಹುದು. ಮಿಸ್‌ಅಪ್ರೋಪ್ರಿಯೋಷನ್ ಇರಬಹುದು. ಮತ್ತೊಂದು ಇರಬಹುದು. ಎಲ್ಲಾದಕ್ಕೂ ಸಹಿತ ಕೆಎಸ್‌ಆರ್‌ಟಿಸಿ ಬೋರ್ಡ್ ಸುಪ್ರೀಂ ಅಥಾರಿಟಿ ಇದೆ. KSRTC Board is the Supreme authority. Except putting the Managing Director and the Chairman and Vice Chairman and also some Directors, you have no other powers.

ಶ್ರೀ ಭೀಮಣ್ಣ ಖಂಡ್ರೆ : ಇಲ್ಲಿ ಕೊಶ್ಚನ್ ಅನ್ಸರ್‌ನಲ್ಲಿ ಅದು ಕೇಳಲ್ಲ, ಅವರು ಇಲ್ಲ ಕೇಳಿದ್ದೇನು ಪ್ರಾಪರ್ಟಿಯನ್ನು ಚೆಕ್ ಮಾಡಿದರೂ ಎಂದು ಪ್ರಶ್ನೆ ಇಲ್ಲ. ಯಾರು ಯಾರು ಕರೆಪ್ಟ್ ಇದ್ದಾರೆ ಅವರ ವಿರುದ್ಧ ಕ್ರಮ ತಗೊಂಡಿದ್ದಾರೆ ಎನ್ನುವ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ. ಪ್ರಾಪರ್ಟಿ ಬಗ್ಗೆ ಕೇಳಿದಾಗ ನೀವು ಹೇಳಿದ್ದುದು ನಾವು ಹೇಳಿದ್ದುದು ಅರ್ಥ ಒಂದೇ ಏನೆಂದರೆ ಆ ಪ್ರಕಾರ ಯಾವುದೂ ಕಾನೂನು ಇಲ್ಲ, ಅದು ಇದ್ದರೆ ಕಾನೂನು ಪ್ರಕಾರ ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ : ಈಗ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಆದರೆ ಇದರಲ್ಲಿ 'ಹೌದು' 'ಹೌದು' ಎಂದು ಹೇಳಿದ್ದಾರೆ. ಈಗ ಈ ರೀತಿ ಭ್ರಷ್ಟಾಚಾರ ಎಲ್ಲಾ ಅನ್ಯಾಯ ಆಗುವುದರಿಂದ ಈ ಕೆ.ಎಸ್‌ಆರ್‌ಟಿಸಿ ಸೋರಿಹೋಗಿ ನಷ್ಟದಲ್ಲಿ ಬಿದ್ದಿರುವುದನ್ನು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಭೀಮಣ್ಣ ಖಂಡ್ರೆ : ಅದು ಗಮನಕ್ಕೆ ಬಂದಿದೆ. ಅದರ ಬಗ್ಗೆ ನಾವು ಆಕ್ಷನ್ ತೆಗೆದುಕೊಳ್ಳುತ್ತಿದ್ದೇವೆ. ಒಂದು ಮಾತು ತಾವು ಕೇಳಿದ್ದೀರಿ ಅದಕ್ಕೆ ಉತ್ತರ ಕೊಡುತ್ತಿದ್ದೇನೆ. 9 cases for acquisition of wealth disproportionate to the known source of income by KSRTC employees was reported out of which 6 cases have been exonerated. In 15 cases punishment has been imposed in accordance with KSRTC C&D Regulations 1971. Remaining 18 cases are in the enquiry stage.

ಉಪಾಧ್ಯಕ್ಷಿಣಿಯವರು : ನಿನ್ನೆಯ ದಿವಸ 8 ಪ್ರಶ್ನೆಗಳು ಲ್ಯಾಪ್ಸ್ ಆಗಿದ್ದಕ್ಕೆ ಸದಸ್ಯರೆಲ್ಲರಿಗೂ ಬಹಳ ಬೇಜಾರು ಆಗಿದೆ. ತಾವು ಮುಂದಿನ ಪ್ರಶ್ನೆ ಹಾಕಿ.

ಹುಮ್ನಾಬಾದ್‌ನಲ್ಲಿರುವ ಕ.ರಾ.ರ.ಸಾ. ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿಗಳ ಕಛೇರಿಯನ್ನು ಬೀದರ್ ನಗರಕ್ಕೆ ಸ್ಥಳಾಂತರಿಸುವ ಬಗ್ಗೆ

918 - ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರಾದ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?